**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಪಾವಗಡ**

**ಸಿಸಿ ನಂ.671/14**

ಚಾಸಾ ಃ 11

ಪ್ರಾಸಾ ಃ 1

**ದಿನಾಂಕಃ 14-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | |
|---|---|
| ಹೆಸರು | ಮೂರ್ತಿ |
| ತಂದೆ ಹೆಸರು | ರಾಮಪ್ಪ |
| ವಯಸ್ಸು | 45 |
| ವೃತ್ತಿ | ಕೂಲಿ |
| ವಾಸ ಸ್ಥಳ | ರೊಪ್ಪ |

**ಕಲಂ 299 ಅ ಪ್ರ ಸಂ ಅಡಿಯಲ್ಲಿ ವಿಚಾರಣೆ.**

**ಮುಖ್ಯ ವಿಚಾರಣೆ ಃ ಮಾನ್ಯ ಎ ಪಿ ಪಿ ಯವರಿಂದಃ**

ನನಗೆ ಚಾಸಾ 1, 2 ಮತ್ತು 10 ರವರ ಪರಿಚಯವಿಲ್ಲ . ಸಾಕ್ಷಿಯು ಧೃಡೀಕೃತ ಮಹಜರ್ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 1 ಎಂದು ಗುರುತಿಸಲಾಯಿತು . ನಾನು ಪೋಲಿಸ್ ಠಾಣೆಯಲ್ಲಿ ನಿಪಿ 1 ಕ್ಕೆ ಅಂದಾಜು ವರ್ಷಗಳ ಹಿಂದೆ ಸಹಿ ಮಾಡಿದ್ದೆನು . ಯಾವ ವಿಷಯವಾಗಿ ನಾನು ಸಹಿ ಮಾಡಿದ್ದೆನು ಎಂದು ನನಗೆ ಗೊತ್ತಿಲ್ಲ . ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಅಂತ ನೆನಪಿಲ್ಲ . ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ನಿಪಿ 1 ಕ್ಕೆ ವ್ಯತಿರಿಕ್ತವಾಗಿ ನುಡಿದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಎಪಿಪಿ ಯವರು ಕೋರಿಕೊಂಡಿರುತ್ತಾರೆ , ಕಾರಣ ಅನುಮತಿ ನೀಡಲಾಯಿತು)

**ಪಾಟೀಸವಾಲು ಃ ಮಾನ್ಯ ಎ ಪಿ ಪಿ ಯುವರಿಂದಃ**

ದಿಃ 28-9-2013 ರಂದು ಪೋಲಿಸರು ಚಾಸಾ 1 ರವರ ಮನೆಯ ಬಳಿ ಬಂದಾಗ ನೀವು , ಚಾಸಾ 1 ಮತ್ತು 10 ರವರು ಸೇರಿದ್ದೀರಿ , ಆಗ ಪೋಲಿಸರು ಘಟನಾ ಸ್ಥಳ ಪರಿಶೀಲನೆ ಮಾಡಿ , ಪೋಟೋಗಳನ್ನು ಮತ್ತು ಲಗ್ನ ಪತ್ರಿಕೆಯನ್ನು ಅಮಾನತ್ತು ಪಡಿಸಿಕೊಂಡು ನಿಪಿ 1 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಿಪಿ 1 ರ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯವನ್ನು ಮಾಡಲು ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ .

**ಪಾಟೀಸವಾಲುಃ** ಆರೋಪಿತನು ತಲೆ ಮರೆಸಿಕೊಂಡಿರುತ್ತಾನೆ , ಆ ಕಾರಣ ಪಾಟೀಸವಾಲು ಇರುವುದಿಲ್ಲ .

**ಮರು ವಿಚಾರಣೆ ಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ.**

**ಪಿ. ಸಿ. ಜೆ. ಮತ್ತು ಜೆಎಂಎಫ್‌ಸಿ,**
**ಪಾವಗಡ.**